ಜೂನ್/ಜುಲೈ–2018 ದ್ವಿತೀಯ ಪಿ.ಯು. ಮಾದರಿ ಉತ್ತರ ಪತ್ರಿಕೆ

ವಿಷಯ: **ಕನ್ನಡ (NS)**

| ಪ್ರ.ಸಂ | ವಿವರ | ಅಂಕ |
|---|---|---|
| | **ಅ – ವಿಭಾಗ** | |
| 1 | ಬುದ್ಧಿವಂತರ ನೆರೆ ಇರಬೇಕು. | 1 |
| 2 | ಮಕ್ಕಳಿಗೆ ಹೇಳುತ್ತಾರೆ. | 1 |
| 3 | ಮಂಜಿನ ಕೆಲಸ ಮಾಡಿದೆ. | 1 |
| 4 | ಗುಟ್ಟೆ ಮಲ್ಲಪ್ಪನಲ್ಲಿ ಮೊರೆಯಿಡುತ್ತಾರೆ. | 1 |
| 5 | ಎಡಗಣ್ಣಿನಲ್ಲಿ ನೋವು. | 1 |
| 6 | ತನ್ನನ್ನೇ ಕೊಡುವೆನೆಂದಳು. | 1 |
| 7 | ಚಂದ್ರಭವನ. | 1 |
| 8 | ಕೊಡಲಿಯನ್ನು ಕೇಳಲು ಬಂದಿದ್ದನು. | 1 |
| 9 | ನಾಯಿ ಕಡಿತಕ್ಕೆ ಚುಚ್ಚುಮದ್ದು ಹಾಕಿಸಿಕೊಳ್ಳಲು. | 1 |
| 10 | ಶಿಕಾರಿಗಂಡಿಯಲ್ಲಿ | 1 |
| | **ಆ – ವಿಭಾಗ** | |
| 11 | ರಾಮ ಲಕ್ಷ್ಮಣರನ್ನು ಸೋಲಿಸಿ ಸೆರೆಹಿಡಿದು ತಂದು ಸೀತೆಯನ್ನು ಒಪ್ಪಿಸುವ ನಿರ್ಧಾರಕ್ಕೆ ಬರುತ್ತಾನೆ | 2 |
| 12 | ಪರುಷದ ಗೃಹದೊಳಗಿದ್ದವನು ತಿರಿಯಲಾರ, ತೊರೆಯೊಳಗಿದ್ದವನು ಕೆರೆಯ ಉದಕವನ್ನು ಅರಸಲಾರ | 2 |
| 13 | ಬಿಸಿಲಲ್ಲಿ ಬಳಲಿದವರಿಗೆ ನೆರಳಿಲ್ಲ, ಹಸಿದವರಿಗೆ ಹಣ್ಣಿಲ್ಲ, ಕುಸುಮವಾಸನೆ, ಕೂಡಲು ಸ್ಥಳ, ಇಲ್ಲದೆ ಅಮೂಲಾಗ್ರ ಪರ್ಯಂತ್ಯ ಮುಳ್ಳಿದ್ದು ನಿರುಪಯುಕ್ತವಾಗಿದೆ. | 2 |
| 14 | ಬೆಳಗಿನಿಂದ ಸಂಜೆಯವರೆಗೂ ಮರೆಯಾಗಿ ಒಮ್ಮೊಮ್ಮೆ ರಜಾದಿನಗಳಲ್ಲಿ ಕಂಡು ಕುಳಿತು ಕೆಮ್ಮುವ ಪ್ರಾಣಿಯ ಹಾಗೆ. | 2 |
| 15 | ಈ ಹೊತ್ತು ಒಂದು ದಿನ ಸೊಸೆಯೊಬ್ಬಳಿಗೆ ಹೊರಗಿನ ಕೆಲಸ ಸಿಗಲಿ. ಒಂದು ಹೂ ಹೆಚ್ಚಿಗೆ ಇಡುತ್ತೇನೆ ಎಂದು ಗುಟ್ಟೆ ಮಲ್ಲಪ್ಪನಲ್ಲಿ ಪ್ರಾರ್ಥಿಸಿದಳು | 2 |
| 16 | ವೈದ್ಯರು ಹೇಳಿದ್ದ ಕೆಲವು ಆಹಾರ ಬದಲಾವಣೆಗಳನ್ನು ಹಾಗು ಯಥೇಚ್ಛವಾಗಿ ನೀರುಕುಡಿಯುವ ಅಭ್ಯಾಸ ಮಾಡಿಕೊಂಡರು. | 2 |
| 17 | ಮುಸುರೆ ಪಾತ್ರೆಯ ಒಡೆಯ ಗುಡ್ಡ, ಹೇಗಿದ್ದರೂ ಚಡ್ಡಿ ಒದ್ದೆಯಾಗಿದೆ, ಹೊಳೆಯಲ್ಲಿ ಈಜಲು ಅಪ್ಪನನ್ನು ಕೇಳುದೋ, ಬಿಡುವುದೋ, ಎಂದು ಯೋಚಿಸಿದನು. | 2 |
| 18 | ದೂರದಲ್ಲಿ ನೋಡಿ, ಎದುರು ಬಂದು ಕಾಲಿಗೆ ನೀರನ್ನು ನೀಡಿ, ಕೈ ಹಿಡಿದು ಒಳ ಚೌಕಿಗೋಯ್ದು ಮಣೆ ಹಾಕಿ ಕುಳ್ಳಿರಿಸಿ, ತಿನ್ನಲು ಹಣ್ಣು, ಕುಡಿಯಲು ಹಾಲು, ನೀಡಿ ಉಪಚರಿಸಿದಳು. | 2 |
| 19 | ಹಾಗೂ ಸಾಯುತ್ತೇವೆ, ಹೀಗೂ ಸಾಯುತ್ತೇವೆ, ಕರಿದ್ದಿದ್ದನ್ನು ತಿಂದೇ ಸಾಯುತ್ತೇವೆ. ಎನ್ನುವುದು ಅವರ ಜಿದ್ದು. | 2 |
| 20 | ಇದು ಗೂಳೂರು ಮಠದ ಆನೆ ಹಾಕಿದ ಮರಿ, ಹುಟ್ಟಿ ಬೆಳೆದಿದ್ದೆಲ್ಲಾ ಊರಿನಲ್ಲೇ, ಜನರ ಮಧ್ಯೆ. | 2 |

| ಇ – ವಿಭಾಗ | | |
|---|---|---|
| 21 | ಕ್ಲೀನರ್, ನಾಟಕ್ಕೆ ಕಟ್ಟಿದ್ದ ಹಗ್ಗ ಬಿಚ್ಚದೇ ಇದ್ದುದ್ದು, ವೇಲಾಯುಧ ನಾಟ ಉರುಳಿಸಲು ಆನೆಗೆ ಹೇಳಿದ್ದು, ನಾಟದ ಸಮೇತ ಲಾರಿ ಉರುಳಿ, ಕ್ಯಾಬಿನ್ನಲ್ಲಿದ್ದ ಜಾಕ್ ಡ್ರೈವರ್ ತಲೆಗೆ ಬಿದ್ದು, ಸತ್ತು ಹೋದ. ಆನೆ ಕಾರಣವಲ್ಲ. | 2 |
| 22 | ಆನೆ ಏನ್ಮಾಡುತ್ತಯ್ಯಾ.? ಎಲ್ಲೋ ಕಂಬದ ಮೇಲೆ ಸತ್ತಿರುವ ತಿಪ್ಪಣ್ಣನಿಗೂ ಎಲ್ಲೋ ಓಡಾಡಿಕೊಂಡಿರೋ ಆನೆಗೂ, ಕಟ್ಟೀರಲ್ಲಯ್ಯಾ. ಬಾಯಿಲ್ಲೋರು ಈ ಪ್ರಪಂಚ್ದಲ್ಲಿ ಬದುಕಂಗಿಲ್ವೇನಯ್ಯಾ.ಎಂದು ನಿರೂಪಕರು ಹೇಳುತ್ತಾರೆ. | 2 |
| 23 | ಬೀಡಿ ಸೇದುವ ಭರದಲ್ಲಿ, ಕ್ಲೀನರ್ ಕೃಷ್ಣಂಗೆ, ಸ್ಟೇರಿಂಗ್ ಕೊಟ್ಟು, ಬೀಡಿ ಸೇದುತ್ತಿದ್ದ, ಡ್ರೈವರ್‌ಗೆ ಲಾರಿ ಗೋಣಿ ಮರದ ಕಡೆಗೆ ಹೋಗುತ್ತಿರುವುದು ಕಂಡು, ಸ್ಟೇರಿಂಗ್ ಬಿಡಲು ಹೇಳುತ್ತಾ ಗಡಿಬಿಡಿಯಲ್ಲಿ ಬ್ರೇಕ್ ಹಾಕುವುದನ್ನು ಮರೆತದ್ದು, ಸಾವಿಗೆ ಕಾರಣವಾಯಿತು. | 2 |
| 24 | ಆಯ್ಕೆ:– ಇನ್ನು ಹುಟ್ಟದೇ ಇರಲಿ, ನಾರಿಯರೆನ್ನವೊಲು<br>ಕವಿ: ಕುಮಾರವ್ಯಾಸ<br>ಕೀಚಕನ ಕಾಟ ತಾಳಲಾರದ ದ್ರೌಪದಿ ಹೀಗೆ ತನ್ನಲ್ಲೇ ನನ್ನ ಈ ಕಷ್ಟ ನಿವಾರಿಸಲು ತನ್ನ ಪತಿಗಳಲ್ಲಿ ಯಾರು ಈ ಕೆಲಸಕ್ಕೆ ಸಮರ್ಥರು? ಭೀಮನನ್ನು ಹೊರತುಪಡಿಸಿ, ಈ ನಾಲ್ವರು ಗಂಡಂದಿರು ಪ್ರಯೋಜನವಿಲ್ಲವೆಂದು, ಭೀಮನು ಪೌರುಷವಂತ. ಅವನಿಂದ ಮಾತ್ರವೇ ಈ ಕೆಲಸ ಸಾಧ್ಯ ಎನ್ನುವ ಭರವಸೆಯಿಂದ ಈ ಮಾತನ್ನು ಹೇಳಿಕೊಳ್ಳುತ್ತಾಳೆ. | 3 |
| 25 | ಆಯ್ಕೆ:– ಬೆಳಗು ಜಾವ<br>ಕವಿ: ದ.ರಾ.ಬೇಂದ್ರೆ.<br>ಹರೆಯ ತುಂಬಿದ ಬಾಳು ಮತ್ತೆ ಮತ್ತೆ ಬರಲಾಗದು. ಮುಪ್ಪು ಬಂದೇ ಬರುತ್ತದೆ. ಅದಕ್ಕಾಗಿ ಚಿಂತಿಸಿ ಕೊರಗುವ ಅಗತ್ಯವೇನಿದೆ. ಅದನ್ನು ತಪ್ಪಿಸಲಾಗದು. ಚಿಂತೆಯಲ್ಲಿ ಕಾಲ ದೂಡುವ ಬದಲು, ಯೌವ್ವನ ಇರುವಾಗಲೇ ಬದುಕನ್ನು ಸ್ವೀಕರಿಸುವ ಅನಿವಾರ್ಯತೆ ಇದೆ. ಎಂದು ಯೌವ್ವನದ ಸಾರ್ಥಕತೆಯನ್ನು ಕವಿ ಹೇಳಿದ್ದಾರೆ. | 3 |
| 26 | ಆಯ್ಕೆ:– ಹತ್ತಿ . . . ಚಿತ್ತ . . . ಮತ್ತು<br>ಕವಿ: ಟಿ ಯಲ್ಲಪ್ಪ<br>ಬೀಜದಿಂದ ಬಂದ ಎಣ್ಣೆ, ಹತ್ತಿಯನ್ನೇ ಸುಡುವುದು ದುರಂತದಂತೆ ಕಂಡರೂ, ಅದೇ ಸೃಷ್ಠಿ ನಿಯಮವಾಗಿ ಬದುಕನ್ನು ಸಾರ್ಥಕಗೊಳಿಸುತ್ತದೆ. ಇಹದ ಬಂಧನಕ್ಕೆ ಸಿಲುಕಿದ ವ್ಯಕ್ತಿ ಅವುಗಳನ್ನು ಸುಟ್ಟು, ಅದನ್ನು ಬೆಳಕನ್ನಾಗಿಸಿ ಬದುಕನ್ನು ಹಸನು ಮಾಡಿಕೊಳ್ಳುವುದು ಅನಿವಾರ್ಯವೆಂಬ ಭಾವದಿಂದ ಲೋಕದ ಒಳಿತಿಗಾಗಿ ತನ್ನನ್ನು ಅರ್ಪಿಸಿಕೊಳ್ಳುವಂತೆ ಮಹತ್ವ ಸಾರುತ್ತದೆ. ಎನ್ನುವ ಭಾವ. | 3 |
| 27 | ಆಯ್ಕೆ:– ವಾಲ್‌ಪರೈ: ಅಭಿವೃದ್ಧಿ ತಂದ ದುರಂತ<br>ಲೇಖಕರು: ಕೃಪಾಕರಸೇನಾನಿ<br>ವಾಲ್‌ಪರೈಗೆ ಮೊದಲು ಭೇಟಿಕೊಟ್ಟ ಕಾರ್ವೆಲ್ ಮಾರ್ಷ ಕುದುರೆಯ ಮೇಲೆ ಬಂದಾಗ ಹಾದಿ ತಪ್ಪಿ ಐದಾರು ಗುಡಿಸಲಿರುವ ಹಾಡಿಯೊಂದನ್ನು ಕಾಣುತ್ತಾನೆ. ಅಲ್ಲಿನ ಆದಿವಾಸಿಗಳು ಕುದುರೆಯ ಖುರ ಪುಟದ ಸದ್ದಿಗೆ ಬೆದರಿ ಹಾಡಿ ಬಿಟ್ಟು ಕಾಡಿನಲ್ಲಿ ಕಣ್ಮರೆಯಾಗುವ ಸಂದರ್ಭದಲ್ಲಿ ಈ ಮಾತು ಬಂದಿದೆ. ವಿಚಿತ್ರ ಪೋಷಾಕಿನ ಈ ಮನುಷ್ಯ ಹಾಗೂ ಈ ಪ್ರಾಣಿಯನ್ನು ಆವರೆಂದು ಕಂಡಿರಲಿಲ್ಲ ಎನ್ನುವ ಭಾವ. | 3 |

| | | |
|---|---|---|
| 28 | ಆಯ್ಕೆ:– ಬದುಕನ್ನು ಪ್ರೀತಿಸಿದ ಸಂತ<br>ಕವಿ: ಪ್ರೊ.ಎಚ್.ಆರ್.ರಾಮಕೃಷ್ಣ ರಾವ್<br>ಕಲಾಂ ರವರು ಹುಡುಗನ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಹೇಳುತ್ತಾ, ಮೊದಲ ವಿಜ್ಞಾನಿ ಯಾರೆಂಬ ಬಾಲಕನ ಪ್ರಶ್ನೆಗೆ, ವಿಜ್ಞಾನದ ಅಡಿಪಾಯವೇ ಪ್ರಶ್ನೆ ಕೇಳುವುದು, ಕುತೂಹಲ ಭರಿತ ಮಕ್ಕಳು ಪ್ರಶ್ನೆ ಕೇಳುವುದರಿಂದ ಅವರೇ ಮೊದಲ ವಿಜ್ಞಾನಿಗಳು. ಎಂಬುದನ್ನು, ವಿಜ್ಞಾನ, ಮತ್ತು ವಿಜ್ಞಾನಿ ಎರಡರ ವಿಚಾರವನ್ನು ಮನಮುಟ್ಟುವಂತೆ ಮಕ್ಕಳಿಗೆ ತಿಳಿಸುವ ಸಂದರ್ಭ | 3 |
| 29 | ಆಯ್ಕೆ:– ಕೃಷ್ಣೇಗೌಡನ ಆನೆ<br>ಲೇಖಕರು: ಕೆ.ಪಿ.ಪೂರ್ಣಚಂದ್ರ ತೇಜಸ್ವಿ.<br>ಮರ ಕಡಿದವನ ಬಗ್ಗೆ, ಕ್ರಮ ಕೈಗೊಳ್ಳುವುದು ಬಿಟ್ಟು, ನನ್ನ ಕೊಡಲಿಯನ್ನೇಕೆ ಇಟ್ಟುಕೊಂಡಿರಿ? ಎಂದ ನಿರೂಪಕನ ಪ್ರಶ್ನೆಗೆ, ಉತ್ತರಿಸುತ್ತಾ ಕೋರ್ಟಿನಲ್ಲಿ ಯಾವುದರಿಂದ ಮರ ಕಡಿದರು? ಎಂದು ಪ್ರಶ್ನಿಸಿದರೆ ಹಾಜರು ಪಡಿಸಲು ವೆಪನ್ ಅನಿವಾರ್ಯ ಎಂದು ಫಾರೆಸ್ಟ್ ಆಫಿಸರ್ ನಾಗರಾಜ ಹೇಳುತ್ತಾನೆ. | 3 |
| 30 | ಆಯ್ಕೆ:– ಕೃಷ್ಣೇಗೌಡನ ಆನೆ<br>ಲೇಖಕರು: ಕೆ.ಪಿ.ಪೂರ್ಣಚಂದ್ರ ತೇಜಸ್ವಿ.<br>ಗಾರ್ಡ್ ರಾಮಪ್ಪ. ಫಾರೆಸ್ಟ್ ಆಫಿಸರ್ ನಾಗರಾಜನಿಗೆ ಹೇಳಿದ್ದು. ಕೃಷ್ಣೇಗೌಡರ ತೋಟದ ಬೇಲಿ ಮೂಲೆಯಲ್ಲಿ, ಬೂರುಗದ ಮರದ ಕೆಳಗಿನ ಶಿಕಾರಿ ಗಂಡಿಯಲ್ಲಿ ನಾಗರಾಜ ಕುಳಿತಲ್ಲಿಗೆ ಬಂದು, ಆನೆಯೊಂದು ಬೇಲಿ ದಾಟಿ ಹೋಗಿದ್ದನ್ನು ನೋಡಿದ್ದಾಗಿ ಹೇಳಿದಾಗ ನಾಗರಾಜ ಮತ್ತೂ ರೇಗುತ್ತಾನೆ. | 3 |
| | **ಈ – ವಿಭಾಗ** | |
| 31 | ಅಂಗೈಯಲ್ಲಿ ಲಿಂಗ ಹಿಡಿದ ಮಾತ್ರಕ್ಕೆ ಆತ ಭಕ್ತನಾಗಲಾರ. ಭಕ್ತಿ ಅಂತರಂಗದಲ್ಲಿರಬೇಕು. ಶಿವಪಥಕ್ಕೆ ಇದೇ ಮಾರ್ಗ. ಅರ್ಥರೇಖೆ ಇದ್ದೂ ಆಯುಷ್ಯ ಇಲ್ಲದಿದ್ದರೆ, ಚಂದ್ರಾಯುಧ ಹೇಡಿಯ ಕೈಯಲ್ಲಿದ್ದರೆ, ಕುರುಡನ ಕೈಯಲ್ಲಿ ದರ್ಪಣವಿದ್ದರೆ, ಮಾಣಿಕ್ಯವು ಮರ್ಕಟನ ಕೈಯಲ್ಲಿದ್ದರೆ, ಹೇಗೆ ನಿರುಪಯುಕ್ತವಾಗುವವೋ ಹಾಗೇ ಅಂಗೈಯಲ್ಲಿ ಲಿಂಗ ಹಿಡಿದ ಮಾತ್ರಕ್ಕೆ ಪ್ರಯೋಜನವಿಲ್ಲ. | 4 |
| 32 | ದ್ರೌಪದಿಯ ಸಂಕಟದ ಮಾತನ್ನು ಕೇಳಿದ ಭೀಮ. ನೆರವಾಗಲು ಹಿಂಜರಿದರೂ, ಅವನ ಅಂತಃಕರಣ ಕರಗಿ ಕೊನೆಗೆ ದ್ರೌಪದಿಯನ್ನು ಅಪ್ಪಿ, ತನ್ನ ಉತ್ತರೀಯದ ಸೆರಗಿನಿಂದ ಅವಳ ಕಣ್ಣೀರನ್ನು ಒರೆಸಿ, ಮುಂದಲೆಯ ಕೂದಲನ್ನು ನೇವರಿಸಿ, ಗಲ್ಲ ಸವರಿ ಮುದ್ದಾಡಿ, ಮಂಚದ ಪಕ್ಕದಲ್ಲಿದ್ದ ಗಿಂಡಿಯ ನೀರಲ್ಲಿ ಮುಖ ತೊಳೆದು ಸಂತೈಸುತ್ತಾ, ಅಣ್ಣನ ಆಜ್ಞೆಯನ್ನು ಮೀರಿ ನೆರವಿಗೆ ಬಂದು ಕೀಚಕನನ್ನು ಸದೆ ಬಡಿದು, ಎದುರಾಡಿದರೆ ವಿರಾಟ ವಂಶವನ್ನೇ ನಿರ್ವಂಶ ಮಾಡುವೆ. ನಮ್ಮ ಗುರುತು ಹಿಡಿದರೆ ಕೌರವರನ್ನೂ, ಮಿಸುಕಾಡಿದರೆ ದೇವಸಂತತಿಯನ್ನೂ ಬಂಡೆಗಲ್ಲಿಗೆ ತಿಕ್ಕುವ ನಿರ್ಧಾರವನ್ನು ಪ್ರಕಟಿಸಿ, ಸಂತೈಸುತ್ತಾನೆ. | 4 |

| | | |
|---|---|---|
| 33 | ಮುಂಬೈ ನಗರದಲ್ಲಿ ಬೆಳೆಯುವ ಮಗು ಯಂತ್ರಗಳ ಮಧ್ಯೆಯೇ ಯಾಂತ್ರಿಕವಾದ ಜೀವನ ನಡೆಸುತ್ತ ಬಿಡುವಿಲ್ಲದ ಓಡಾಟದ ಬೆಳವಣಿಗೆಯ ಬೃಹತ್ ನಗರಗಳಲ್ಲಿ ಬಾಳಲು ಬೇಕಾದುದ್ದು ಬುದ್ಧಿವಂತಿಕೆ ಮಾತ್ರ. ಹಾಗಾಗಿ ಮಗು ಕ್ಯೂ ನಿಲ್ಲುವುದನ್ನು, ಫುಟ್‌ಪಾತಿನಲ್ಲಿ ಸಾವಿರ ಚಕ್ರದ ಉರುಳಿನ ವಾಹನಗಳ ಮಧ್ಯದಲ್ಲಿ ಎಚ್ಚರಿಕೆಯಿಂದ  ರಸ್ತೆ ದಾಟುವುದನ್ನು ಕಲಿತು, ಅವರಿವರನ್ನು ತಳ್ಳಿ ಬೇರೂರ ಬೇಕಾದ ಅನಿವಾರ್ಯತೆಯನ್ನು ಹೇಳುತ್ತಾ. ಶಾಲಾ ಕಾಲೇಜುಗಳಲ್ಲಿ ಕಲಿಯುವುದು ಕಡಿಮೆ, ಜೊತೆಗೆ ಜಾಹಿರಾತು ರೇಡಿಯೋಗಳಲ್ಲಿ ಮಾಡಿದ ಶಿಫಾರಸ್ಸನ್ನು ತಲೆಯಲ್ಲಿ ಬಹಳ ತುಂಬಿಕೊಂಡು ಸ್ವಂತಿಕೆಯಿಲ್ಲದೇ ಪರರ ಕೈಗೊಂಬೆಯಾಗಿ ಬಾಳ ಬೇಕೆಂದು ಕವಿ ಹೇಳುತ್ತಾರೆ. | 4 |
| 34 | ಫೋನಿನ ರಿಂಗಣದೊಂದಿಗೆ ಆರಂಭಗೊಳ್ಳುವ ಮುದುಕಿಯ ತಳಮಳ ಫೋನ್ ಎತ್ತುವುದೋ, ಬಿಡುವುದೋ? ಸೊಸೆ ಏನ್ನುವಳೋ? ಮಗ ಗದರುವನೋ? ಮೊಮ್ಮಗಳು ಸರಿಯಾಗಿ ಕೇಳಿಸಿ ಕೊಳ್ಳದೇ ರೈಟನ್ನೇ ರಾಂಗ್ ಎಂದಳೋ? ಅಲ್ಲಿ, ಮುದುಕ ಭಾಷೆ ಬರದವರ ಮಧ್ಯೆ ಹೇಗಿರುವನೋ? ಎಂದು ಅಡುಗೆಮನೆ, ಓದುವ ಕೋಣೆ ಮಹಡಿ ಎಲ್ಲಾ ಕಡೆ ಓಡಾಡಿ ತಳಮಳ ವ್ಯಕ್ತ ಪಡಿಸುತ್ತಾಳೆ. | 4 |
| 35 | ಬಸಲಿಂಗ ಕೊನೆಯಲ್ಲಿ ತನ್ನ ಬಲಗಣ್ಣನ್ನಾದರೂ ಉಳಿಸಿಕೊಳ್ಳಲು ನಿರ್ಧರಿಸುತ್ತಾನೆ. ಅದರಲ್ಲಿ ದೃಷ್ಠಿ ಮಂದಗಾಗುತ್ತಿರುವುದು ಅವನ ಅರಿವಿಗೆ ಬಂದು ತನ್ನ ಉಡಾಫೆ, ಸುಳ್ಳು, ಜಾತಿ, ಮತದ ಗುರು ಯಾರು ನನ್ನನ್ನು ಉಳಿಸುವುದಿಲ್ಲ ಎಂದು ನಿಶ್ಚಯವಾಗಿ ಡಾ॥ ತಿಮ್ಮಪ್ಪನವರ ಮಿಂಚಿನ ಬೆರಳು, ಪ್ರೀತಿ ತುಂಬಿದ ಮುಖ ನೆನಪಿಗೆ ಬಂದು, ತನ್ನ ಕಣ್ಣನ್ನು ಉಳಿಸುವವರು ಅವರೇ ಎಂದು ತೀರ್ಮಾನಿಸಿ, ಅವರನ್ನು ಭೇಟಿಯಾಗುವ ನಿರ್ಧಾಕ್ಕೆ ಬಂದನು. | 4 |
| 36 | ಪ್ರತಿಯೊಬ್ಬ ಕನ್ನಡಿಗನೂ, ಅಂಗುಲ ಅಂಗುಲದಲ್ಲಿಯೂ ಕನ್ನಡ ಬೆರೆಸಿಕೊಂಡು ತಮ್ಮನ್ನು ತಾವೇ ಪ್ರಶ್ನಿಸಿಕೊಂಡು, ಅನುಸರಿಸಿ, ನಾವು, ನಮ್ಮ ಮಕ್ಕಳನ್ನು ಯಾವ ಶಾಲೆಯಲ್ಲಿ ಓದಿಸುತ್ತಿದ್ದೇವೆ? ಯಾವ ಪತ್ರಿಕೆ ಓದುತ್ತೇವೆ? ನಾವು ನೋಡುವ ಸಿನಿಮಾ ಯಾವುದು? ನಮ್ಮ ಮನೆಯ ಬೋರ್ಡ್, ಲಗ್ನಪತ್ರಿಕೆ, ಲೆಟರ್ ಹೆಡ್, ಚೆಕ್, ಇವು ಯಾವ ಭಾಷೆಯಲ್ಲಿವೆ? ಇಂತಹ ಪ್ರಶ್ನೆಗಳ ಉತ್ತರ ನಮ್ಮನ್ನು ಚುಚ್ಚದಿದ್ದರೆ, ಕನ್ನಡವನ್ನು ಕುರಿತು ಮಾತಾಡಲು ಯೋಗ್ಯತೆ ಗಳಿಸಿಕೊಂಡಿದ್ದೇವೆ ಎಂದರ್ಥ. | 4 |
| 37 | ಕುದುಪ ಚಿನ್ನಮ್ಮನ ಕೈಗೆ ಒಂದು ಲೋಟವನ್ನು ಕೊಟ್ಟಾಗ, ಅದು ಯಾರದೋ ಲೋಟ, ಹೊಳೆ ಹೊತ್ತು ತಂದಿರಬಹುದು. ಎಂದು ವೆಂಕಪ್ಪಯ್ಯನವರು ಕಿರುಗಣ್ಣಿನಿಂದ ಗಮನಿಸಿದಾಗ ಅವರ ಎದೆ ಬಡಿತ ಲಯ ತಪ್ಪಿ, ಸಮಸ್ತ ವ್ಯವಹಾರಗಳು ಸ್ತಬ್ಧಗೊಂಡಂತೆ, ಚಿನ್ನಮ್ಮ ತನ್ನ ಕೈಯಲ್ಲಿ ಲೋಟ ಹಿಡಿದು ತಿರುಗಿಸುತ್ತಿದ್ದರೆ ತಮ್ಮನ್ನೇ ತಿರುಗಿಸಿದಂತೆ, ಆ ಲೋಟ ತಮ್ಮದೇ ಎಂದು. ತಮ್ಮ ದಾಂಪತ್ಯ ಜೀವನದ ಸಾಕ್ಷಿ ಎಂದು, ಅರಿವಾಗಿ ಕುದುಪನ ಸಂಸಾರದ ಮೇಲೆ ಆಪಾದನೆ ಹೊರಿಸಿ, ತಾನು ತೋರಿದ ಅಮಾನವೀಯ ವರ್ತನೆಯನ್ನು ನೆನೆದು ನಡುಗಿದರು. | 4 |

| | | |
|---|---|---|
| 38 | ಕಾಡಾನೆಗಳು ಅಲ್ಲಿ, ಇಲ್ಲಿ, ಯಾರನ್ನೋ ಹೆದರಿಸಿ ತೊಂದರೆ ಮಾಡಿದ್ದವೆಂಬ ವರ್ತನಮಾನ ನಿರೂಪಕರಿಗೆ ಬರುತ್ತಿತ್ತಷ್ಟೆ. ಆನೆಗಳ ಹಾವಳಿಯ ಬಗ್ಗೆ ಪರಿಚಯವಿರಲಿಲ್ಲ. ಒಂದು ದಿನ, ಮನೆ ನಲ್ಲಿಗೆ ಹಾಕಿದ್ದ ಪೈಪಿನಲ್ಲಿ ನೀರು ಬರುವುದು ನಿಂತು, ಪೈಪು ಎಲ್ಲಿ ಹಾಳಾಗಿದೆ ಎಂದು ನೋಡುತ್ತಾ ಹೋದ ನಿರೂಪಕರಿಗೆ, ದಾರಿಯಲ್ಲಿ ಗುಂಡಿ ಬಿದ್ದು, ಪೈಪು ಪುಡಿಪುಡಿಯಾಗಿ ಪಾತಾಳದವರೆಗೆ ಹುದುಗಿಹೋಗಿ, ಹೆಜ್ಜೆ ಇಟ್ಟಲ್ಲೆಲ್ಲ ಸಣ್ಣ ಬಾವಿಗಳ ಹಾಗೆ ಗುಂಡಿಗಳು ಬಿದ್ದು, ಆನೆಯ ಕಾಟ ಈ ರೀತಿ ಇರಬಹುದು ಎಂಬ ಅರಿವಾಯಿತು. | 4 |
| 39 | ದುರ್ಗಪ್ಪನಿಗೆ ಶಿವೇಗೌಡರ ಸಾಮಿಲ್‌ನ ಎದುರುಹೋಗಿದ್ದ ಕಳಸಾ ಲೈನನ್ನು ನೋಡಿಕೊಳ್ಳಲು ಕೊಟ್ಟಿದ್ದರು. ಇದು ತುಂಬಾ ತರಲೆ ಲೈನು ಎಂದು ಹೆಸರಾಗಿತ್ತು. ಹಳೇ ಕೋಟೆ, ಗೌಡಳ್ಳಿ, ಬೈರಾಪುರ, ಬಣಕಲ್ಲು, ಜಾವಳಿ, ಎಲ್ಲೆಲ್ಲೋ ಕಗ್ಗಾಡಿನ ನಡುವೆ ನುಸುಳಿ ಹೋಗಿತ್ತು. ಕಾಡಿನ ಯಾವ ಮೂಲೆಯಲ್ಲಿ ಕೊಂಬೆ ಮುರಿದು ಬಿದ್ದರೂ, ಬಾವಲಿ ಸಿಕ್ಕಿಕೊಂಡರೂ, ಇಡೀ ಲೈನು ಕಟ್ಟಾಗುತ್ತಿತ್ತು. ದಿನಾ ಬೆಳಗಾದರೆ, ಕಟಿಂಗ್‌ಪ್ಲೇಯ್‌ರು ತಂತಿ ಹಿಡಿದು, ಹುಡುಕಿಕೊಂಡು ಹೋಗುವ ಇವನ ಕಷ್ಟ ಯಾರಿಗೂ ಬೇಕಾಗಿರಲಿಲ್ಲ. ಮೇಲಧಿಕಾರಿಗಳ ಬೈಗುಳ, ಫಾರೆಷ್ಟಾಫೀಸರ್ ನಾಗರಾಜನ ಆರೋಪ, ತನ್ನ ಕೆಲಸದ ಮೇಲೆ ರೇಜಿಗೆ ಹುಟ್ಟುವಂತೆ ಮಾಡಿತು. | 4 |
| 40 | ಟೆಲಿಫೋನ್ ತಿಪ್ಪಣ್ಣ ಲೈನ್‌ಮೆನ್ ಆಗಿ ಕೆಲಸ ನಿರ್ವಹಿಸುತ್ತಿದ್ದ ನುಗ್ಗೇಹಳ್ಳಿಯ ಸಮೀಪದ ಲೈನ್‌ನಲ್ಲಿ ತೊಂದರೆ ಇದೆ ಎಂದು, ಆತ ಬೆಳಗ್ಗೆ ಎಕ್ಸ್‌ಚೇಂಜ್ ಬಳಿ ಬಂದಾಗ ಅಷ್ಟೂ ಲೈನ್‌ಗಳ ಡೆಡ್‌ಆಗಿರುವ ಸಂಗತಿ ತಿಳಿದು, ಸರಿಪಡಿಸಲು ಹದಿನೇಳನೇ ಕಂಬದ ಮೇಲೆ ಹತ್ತಿ ಜಂಕ್ಷನ್ ಬಾಕ್ಸ್ ಬಿಚ್ಚಿ ಏನನ್ನೋ ಮೀಟುತ್ತಿರಬೇಕಾದರೇ, ವಿದ್ಯುತ್‌ತಂತಿ ಟೆಲಿಫೋನ್ ತಂತಿಗೆ ತಗುಲಿ ಶಾಕ್ ಹೊಡೆದು ಕುಳಿತ ಭಂಗಿಯಲ್ಲೇ ತಿಪ್ಪಣ್ಣ ಸತ್ತುಹೋದ. | 4 |
| | **ಉ – ವಿಭಾಗ** | |
| 41 | ಕವಿ : ನಾಗಚಂದ್ರ.<br>ಆಯ್ಕೆ : ಕದಡಿದ ಸಲಿಲಂ ತಿಳಿವಂದದೆ.<br>ಅವಲೋಕಿನಿ ವಿದ್ಯೆಯನ್ನು ಸಾಧಿಸಿದ ರಾವಣನು, ಸೀತೆಯನ್ನು ನೋಡಲು ಪ್ರಮದವನಕ್ಕೆ ಬಂದಾಗ, ಅವನ ರೂಪವನ್ನು ಖಚರಕಾಂತೆಯರು ಹೊಗಳಿದಾಗ, ಸೀತೆ ಅವನ ರೂಪ, ಐಶ್ವರ್ಯ, ರಾಜ್ಯಲಕ್ಷ್ಮಿಯನ್ನು ತೃಣ ಸಮಾನವಾಗಿ ಭಾವಿಸುತ್ತಾಳೆ. ಆಗ ರಾವಣ ತನ್ನ ಮನದಲ್ಲಿ ಈ ಮಾತನ್ನು ಹೇಳಿಕೊಳ್ಳುತ್ತಾನೆ. ಪೌರುಷ ಪ್ರೇಮಿಯಾದ ಈಕೆಯನ್ನು ನಾನು ಇಷ್ಟ ಪಡುವುದು ಸರಿಯಲ್ಲ. ಈಕೆ ಅಸಾಧಾರಣ ಹೆಣ್ಣು. ನನ್ನ ರೂಪವನ್ನು ರಾಜ್ಯದ ಸಿರಿಯನ್ನು ದಿಕ್ಕರಿಸಿ ರಾಮನನ್ನೇ ಬಯಸುವ, ಈಕೆಯಂತೆ ಪತಿ ಭಕ್ತಿಯಲ್ಲಿ ಯಾರೂ ಇರಲು ಸಾಧ್ಯವಿಲ್ಲ. ಇವಳಂತೆ ಒಳ್ಳೆಯ ಭಾವನೆಯನ್ನು ಒಳಗೊಂಡ ಪುಣ್ಯವತಿಯರಾದ ಸತಿಯರು ಯಾರಿದ್ದಾರೆ ಎನ್ನುವ ಭಾವ. (ಪ್ರತಿ ಬಾರಿ ರಾವಣನು ಬಂದಾಗ, ಅವನನ್ನು ನೋಡದೆ ಒಂದು ಹುಲ್ಲು ಕಡ್ಡಿಯನ್ನು ಹಿಡಿದುಕೊಂಡು ನೋಡುತ್ತಾ ಮಾತಾಡುತ್ತಿರುತ್ತಾಳೆ.) | 5 |

| | | |
|---|---|---|
| 42 | ಕವಿ : ಪುಲಿಗೆರೆ ಸೋಮನಾಥ.<br>ಆಯ್ಕೆ : ಪಗೆಯಂ ಬಾಲಕನೆಂಬರೇ.<br>ಶತ್ರುಗಳ ವಿಚಾರದಲ್ಲಿ ಮಾನವೀಯತೆಯಾಗಲಿ ಪ್ರೀತಿಯಾಗಲಿ ಇರಬಾರದು. ಅದರಿಂದ ಚಿಕ್ಕದು ಎನ್ನುವ ತಾತ್ಸಾರ ಸಲ್ಲದು. ಅವುಗಳು ತಮ್ಮ ಗುಣಗಳನ್ನು ಕಳೆದುಕೊಂಡು ಒಳ್ಳೆಯವರಾಗುತ್ತಾರೆ, ಎನ್ನುವುದು ಮೂರ್ಖತನ. ಆದ್ದರಿಂದ ಚಿಗುರಾಗಿದ್ದಾಗ ಬೇವು ಬಣ್ಣದಲ್ಲಿ ಕೆಂಪಾಗಿದ್ದರೂ ತನ್ನ ಕಹಿಯನ್ನು ಬಿಡಲಾರದು. ಚೇಳನ್ನು ಚಿಕ್ಕದು ಎಂದು ಅಕ್ಕರೆಯಿಂದ ಮುಟ್ಟಲು ಕಚ್ಚದೇ ಬಿಡದು. ಹಾಲನ್ನೆರೆದರೂ ಹಾವು ವಿಷ ಬಿಡದು. ಪಕ್ಷಿಪ್ರಿಯನೆಂದು ಗೂಬೆಮರಿಯನ್ನು ಪ್ರೀತಿಯಿಂದ ಸಾಕಲಾಗದು. ಹಾಗೆಯೇ ಹಗೆಯನ್ನು ಬಾಲಕನೆಂದು ಪರಿಗಣಿಸಿ ಬಿಟ್ಟರೆ ಮುಂದೆಯಾಗುವ ಅನಾಹುತ ದೊಡ್ಡದು, ಎನ್ನುವ ಭಾವ. ಹೀಗೆ ಪ್ರಶ್ನಿಸುವ ಮೂಲಕ ಶತ್ರುಗಳ ವಿಚಾರದಲ್ಲಿ ಎಚ್ಚರದಿಂದಿರಬೇಕು ಎಂದು ಸೋಮನಾಥ ಹೇಳುತ್ತಾನೆ. | 5 |
| | **ಭಾಷಾಭ್ಯಾಸ** | |
| 43 | ಯುದ್ಧ, ಕದನ<br>ಆಕಾಶ, ಗಗನ | 2 |
| 44 | ಕಡು<br>ಮರಿ | 2 |
| 45 | ಉಪನ್ಯಾಸಕರ ವಿವೇಚನೆಗೆ ಬಿಟ್ಟಿದ್ದು | 2 |
| 46 | ಕಟ್ಟು<br>ಹೋಗು | 2 |
| 47 | ಪರೀಕ್ಷಿಸು<br>ಆಕಾಶ | 2 |
| 48 | ಬರರು<br>ಮಾಡನು | 2 |
| 49 | ಸಪ್ತಮೀ<br>ಚತುರ್ಥೀ | 2 |
| 50 | ಅರ್ಥ<br>ವಿವರಣೆ<br>ಒಡಲು (ಉಪನ್ಯಾಸಕರ ವಿವೇಚನೆಗೆ ಬಿಟ್ಟಿದ್ದು)<br>ಉಪಸಂಹಾರ | 1<br>1<br>2<br>1 |
| 51 | ಅರ್ಥ<br>ವಿವರಣೆ<br>ಒಡಲು (ಉಪನ್ಯಾಸಕರ ವಿವೇಚನೆಗೆ ಬಿಟ್ಟಿದ್ದು)<br>ಉಪಸಂಹಾರ | 1<br>1<br>2<br>1 |
| 52 | ವಿಳಾಸ<br>ಒಡಲು<br>ವಿಷಯ (ಉಪನ್ಯಾಸಕರ ವಿವೇಚನೆಗೆ ಬಿಟ್ಟಿದ್ದು)<br>ಮುಕ್ತಾಯ | 1<br>1<br>1<br>1 |

| | | |
|---|---|---|
| 53 | ವಿಕಾಸ<br>ಒಡಲು<br>ವಿಷಯ (ಉಪನ್ಯಾಸಕರ ವಿವೇಚನೆಗೆ ಬಿಟ್ಟಿದ್ದು)<br>ಮುಕ್ತಾಯ | 1<br>1<br>1<br>1 |
| 54 | ಅರ್ಥ<br>ವಿವರಣೆ (ಉಪನ್ಯಾಸಕರ ವಿವೇಚನೆಗೆ ಬಿಟ್ಟಿದ್ದು)<br>ಮುಕ್ತಾಯ | 4 |
| 55 | ಅರ್ಥ<br>ವಿವರಣೆ (ಉಪನ್ಯಾಸಕರ ವಿವೇಚನೆಗೆ ಬಿಟ್ಟಿದ್ದು)<br>ಮುಕ್ತಾಯ | 4 |